ಆಗಲಿ ಅಥವಾ ಇನ್ನು ಇತರೇ ಮಾರ್ಕೆಟ್‌ಗಳಲ್ಲಿ ಬಹಳ ದೂರ ಇರುವುದರಿಂದ ಇದನ್ನು ಅಲ್ಲಿ ಕಟ್ಟ ಬೇಕಾಯಿತು. ಇದರಿಂದ ಅವರಿಗೆ ಬಹಳ ಅನುಕೂಲವಾಗಿದೆ ಆದರೆ ಅದನ್ನು ಚೆನ್ನಾಗಿ ಕಟ್ಟಿದ್ದಾರೆ ಎಂದು ಹೇಳುತ್ತೇನೆ. ಮತ್ತು ಅದನ್ನು ಕಟ್ಟುವುದಕ್ಕೆ ಹಣ ಜಾಸ್ತಿಯಾಗಿ ಖರ್ಚಾಗಿದೆ. ಒಟ್ಟಿನಲ್ಲಿ ಈ ಅರಿಯರ್ಸ್ ಅನ್ನು ವಸೂಲ್ಮಾಡುವುದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆ ಮತ್ತು ಅದನ್ನು ಯಾವ ರೀತಿ ರೆವ್ಮನರೇಟೀವ್ ಎಂಟರ್‌ಪ್ರೈಸ್ ಮಾಡಬೇಕೋ ಆ ರೀತಿ ಅದನ್ನು ಮಾಡುತ್ತೇನೆ.

Government Servants in the State

834. SRI P. ANANDA KUNDA HEGDE (Bhramhavara).—Will the Minister for Finance be pleased to state :—

(a) the total number of Government employees working in various departments of Government in all the cadres in the State:

(b) the total amount spent in respect of these employees and directly and indirectly?

SRI S. M. YAHYA (Minister for Finance).—

(a) 3.63 lakhs.

(b) Nearly an amount of Rs. 219.29 crores per year.

ಶ್ರೀ ಪಿ. ಆನಂದಕುಂದ ಹೆಗಡೆ.—ಅಧ್ಯಕ್ಷರೇ ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಸುಮಾರು ವರ್ಷಕ್ಕೆ ೨೧೯.೨೯ ಕೋಟಿ ರೂಪಾಯಿಗಳು ಎಂದು ಹೇಳಿದ್ದೀರಿ. ನಮ್ಮ ರಾಜ್ಯದ ೪೦೦ ಕೋಟಿ ರೂಪಾಯಿ ಆದಾಯದಲ್ಲಿ ಶೇಕಡ ೫೦ ಭಾಗಕ್ಕಿಂತ ಹೆಚ್ಚು ಹಣ ಈ ಆಡಳಿತ ನಿರ್ವಹಣೆಗೆ ವೆಚ್ಚವಾಗುತ್ತಾ ಇದೆ. ಇದರಿಂದ ಏನಾಗಿದೆ ಎಂದರೆ ನಮ್ಮ ಕರ್ನಾಟಕದ ನೆಲೆಯಲ್ಲಿರುವ ಭಾಗಗಳಿಗೆ ಅಭಿವೃದ್ಧಿಗಾಗಿ ಏನು ಬಂಡವಾಳ ತೊಡಗಿಸಬೇಕೋ ಅದಕ್ಕೆ ಹಣ ಕಡಿಮೆಯಾಗುತ್ತದೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಆಡಾಳಿತಾತ್ಮಕ ದೃಷ್ಟಿಯಿಂದ ಈ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವೇ ಮತ್ತು ಆರ್ಥಿಕವಾಗಿ ಈ ಒಂದು ರಾಜ್ಯದ ಆದಾಯದಲ್ಲಿ ಈ ಆಡಳಿತಾತ್ಮಕವಾದ ವೆಚ್ಚವನ್ನು ಕಡಿಮೆ ಮಾಡುವುದಕ್ಕೋಸ್ಕರ ಏನಾದರೂ ಒಂದು ಸೂತ್ರವನ್ನು ಹಾಕಿಕೊಂಡಿದ್ದೀರಾ ?

† ಶ್ರೀ ಎಸ್. ಎಂ. ಯಾಹ್ಯಾ.—ಸರ್ಕಾರೀ ನೌಕರರಿಗೆ ಹಣವನ್ನು ಖರ್ಚು ಮಾಡಬೇಕಾಗುವುದನ್ನು ಅವಾಯಿಡ್ ಮಾಡುವುದಕ್ಕಾಗುವುದಿಲ್ಲಾ. ಮಾನ್ಯ ಸದಸ್ಯರು ಶೇಕಡ ೫೦ ರಷ್ಟು ಹಣವನ್ನು ಇವರಿಗೆ ಖರ್ಚು ಮಾಡುತ್ತಿದ್ದಾರೆ ಎಂತ ಏನು ಹೇಳಿದರೋ ಅದು ಸರಿಯೆಲ್ಲ ಎಂದು ಹೇಳುತ್ತೇನೆ. ಇವರಿಗೆ ಖರ್ಚಾಗತಕ್ಕಂಥಾದ್ದು ಶೇಕಡ ೩೨ ರಷ್ಟು ಮಾತ್ರ. ಪ್ಲಾನ್‌ನಲ್ಲಿ ಖರ್ಚು ಮಾಡುವ ಹಣ ಅಭಿವೃದ್ಧಿಗಾಗಿ ಹೋಗುತ್ತದೆ. ನಾನ್‌ಪ್ಲಾನ್‌ನಲ್ಲಿ ಹೂಡಿದ ಹಣ ಈ ಸರ್ಕಾರೀ ನೌಕರರಿಗೆ ಖರ್ಚು ಮಾಡಬೇಕಾಗಿದೆ. ಆದುದರಿಂದ ಸರ್ಕಾರದ ಪ್ರೋಗ್ರಾಂನಂತೆ ಒಂದು ವ್ಯವಸಾಯದ ಅಭಿವೃದ್ಧಿಯಾಗಲೀ ಯಾವುದೇ ಒಂದು ಅಭಿವೃದ್ಧಿ ಕಾರ್ಯ ಆಗಲಿ ಅದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಸರ್ಕಾರೀ ನೌಕರರುಗಳು ಬಹಳ ಅಗತ್ಯ ಇದೆ. ಅದಕ್ಕಾಗಿ ನಾವು ಅವರಿಗೆ ಹಣ ಖರ್ಚು ಮಾಡುತ್ತೇವೆ. ಇತರೇ ರಾಜ್ಯಗಳೊಂದಿಗೆ ನಮ್ಮ ಕರ್ನಾಟಕವನ್ನು ಹೋಲಿಸಿ ನೋಡಿದರೆ ನಾವು ಅವರಿಗೆ ಸ್ವಲ್ಪ ಕಡಿಮೆಯಾಗಿ ಉತ್ತಮ ರೀತಿಯಲ್ಲಿ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಬೇಕಾಗಿದೆ.

ಶ್ರೀ ಪಿ. ಆನಂದಕುಂದ ಹೆಗಡೆ.—ರಾಜ್ಯದಲ್ಲಿ ರಜಾದಿವಸಗಳನ್ನು ಕಡಿಮೆ ಮಾಡುವ ಸಾಧ್ಯತೆ ಇದೆಯೇ ಮತ್ತು ಕೆಲಸದ ಅವಧಿಯನ್ನು ಹೆಚ್ಚು ಮಾಡುವ ಸಾಧ್ಯತೆ ಇದೆಯೇ ಎಂದು ನಾನು ಕೇಳ ಬಯಸುತ್ತೇನೆ. ನೌಕರರ ಸಂಖ್ಯೆಯ ಹೆಚ್ಚು ಮಾಡಿರುವುದಕ್ಕೆ ಏನಾದರೂ ಸೂತ್ರಗಳು ಇವೆಯೇ ?

ಶ್ರೀ ಎಸ್. ಎಂ. ಯಾಹ್ಯಾ—ಸೂತ್ರ ಇಲ್ಲದೆ ಎರಡೂವರೆ ಲಕ್ಷ ನೌಕರರನ್ನು ಇಷ್ಟು ಚೆನ್ನಾಗಿ ಆರ್ಗನೈಸ್ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಸೂತ್ರವಿರುವುದರಿಂದಲೇ ಇವರಿಗೆ ಯಾವ ರೀತಿ ಸ್ಯಾಲರಿ ಕೊಡಬೇಕು ಎನ್ನುವುದು ಮಾಡಿರುವುದು, ಇವರಿಗೆ ಡಿ.ಎ.ಎಚ್.ಆರ್.ಎ. ಕೊಡಬೇಕಾದರೆ ನಾವು ಸೂತ್ರದ ಮೂಲಕವೇ ಕೊಡುತ್ತಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ—ನಾರಾಯಣ ಪೈ ಕಮಿಷನ್ ವರದಿಯ ಪ್ರಕಾರ ನೌಕರರಿಗೆ ಸೌಲಭ್ಯಗಳನ್ನು ಕೊಡುತ್ತಿದ್ದು, ಇತ್ತೀಚಿನ ದಿವಸಗಳಲ್ಲಿ ಬೆಲೆಗಳ ಏರಿಕೆಯಿಂದಾಗಿ ತಾವು ಗೊತ್ತು ಮಾಡಿರುವ ಸೌಲಭ್ಯಗಳು ಅವರಿಗೆ ಸಾಕಾಗುವುದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇವರಿಗೆ ಖರ್ಚು ಮಾಡುವುದು ಅನಿವಾರ್ಯವಾಗಿ ಮಾಡಬೇಕಾದ ಪೆಚ್ಚಿ. ಇದನ್ನು ಕಡಿಮೆ ಮಾಡುವ ಪ್ರಮೇಯವೇ ಇಲ್ಲ. ಆದ್ದರಿಂದ ಪರಿಸ್ಥಿತಿಗನುಗುಣವಾಗಿ ಅವರಿಗೆ ಅನುಕೂಲತೆಗಳನ್ನು ಕೊಡಬೇಕೆನ್ನುವುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಎಸ್. ಎಂ ಯಾಹ್ಯಾ— ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರು ಒಂದು ದೃಷ್ಟಿಯಿಂದ ಪ್ರಶ್ನೆಯನ್ನು ಕೇಳಿದರೆ ಮಾನ್ಯ ಸದಸ್ಯರಾದ ಆನಂದಕುಂದ ಹೆಗಡೆಯವರು ಇನ್ನೊಂದು ದೃಷ್ಟಿಯಿಂದ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಎರಡು ಪ್ರಶ್ನೆಗಳಲ್ಲಿಯೂ ಬಹಳಷ್ಟು ಅರ್ಥವಿದೆ. ಬೆಲೆಗಳು ದಿನೇ ದಿನೇ ಏರುತ್ತಿರುವುದರಿಂದಲೇ ನಾವು ಅವರಿಗೆ ಹಾರ್ಡ್‌ಷಿಪ್ ಅಲೋಯನ್ಸ್ ಕೊಟ್ಟಿದ್ದೇವೆ ಮತ್ತು ಒಂದು ಕಂತು ಡಿ.ಎ. ಕೂಡ ಡಿಕ್ಲೇರ್ ಮಾಡಿದ್ದೇವೆ. ಮಾನ್ಯ ಹೆಗಡೆಯವರು ಸರ್ಕಾರದವರು ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ಗೆ ಹೆಚ್ಚು ಹಣ ಕೊಡುತ್ತಿಲ್ಲ, ಎಂದು ಹೇಳುವುದರಲ್ಲಿಯೂ ಅರ್ಥವಿದೆ. ಅದಕ್ಕಾಗಿಯೇ ನಾವು ಈ ಎರಡನ್ನು ಬ್ಯಾಲೆನ್ಸ್ ಮಾಡಿಕೊಂಡು, ನೌಕರರಿಗೂ ಧಕ್ಕೆಯಾಗಬಾರದು. ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೂ ತೊಂದರೆಯಾಗಬಾರದು ಎನ್ನುವ ರೀತಿಯಲ್ಲಿ ಕೆಲಸಮಾಡುತ್ತಿದ್ದೇವೆ,

SRI H. GANGADHARAN—I would like to know whether this Rs. 219.29 lakhs includes Travelling Allowance and D.A. Don't you think that there is over-employment in the Government ?

SRI S. M. YAHYA—It is not true that there is over-employment. It includes T.A. and other allowances. The details are as follows :

Pay of the officers-1978 Revised estimates Rs. 21 crores.
Pay of staff : Rs. 179 crores, 97 lakhs. 94 lakhs.

Other allowances Rs. 17 crores 4 lakhs.—D.A. is merged an therefore, it is not shown separately.

Release of encroached excise land to landless people in Arsikere Taluk

843. SRI D. B. GANGADHARAPPA (Arsikere)—Will the Minister for Labour and Excise be pleased to state:—

(a) the extent of Excise land encroached and since how many years in Arsikere Taluk;

(b) whether it is a fact that Poor people have constructed houses in Excise Lands in the said Taluk ;

(c) if so, whether the Goverment in end to consider their cases sympathetically and released the encroached land in favour of the landless people ?